REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 33 । ಸಂಚಿಕೆ : 25 । 23 ಸೆಪ್ಟೆಂಬರ್ 2026 । ಬುಧವಾರ । ಪುಟಗಳು : 8 । ಬೆಲೆ : 2/-

## ಮಹಾಮಂಡಳದ 61ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆ



**ಬೆಂಗಳೂರು** : ದಿನಾಂಕ : 16.09.2026ರಂದು ಕೆ.ಎಚ್. ಪಾಟೀಲ ಸಭಾಂಗಣದಲ್ಲಿ ಜರುಗಿದ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ 61ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಮಹಾಮಂಡಳದ ಸನ್ಮಾನ್ಯ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರು ಉದ್ಘಾಟಿಸಿ ಮಾತನಾಡಿ, ನಮ್ಮ ಪಟ್ಟಣ ಸಹಕಾರ ಬ್ಯಾಂಕಿಂಗ್ ವಲಯದ ಬೆಳವಣಿಗೆಯಿಂದ ಕಳೆದ ನಾಲ್ಕೈದು ವರ್ಷಗಳಲ್ಲಿ ನಮ್ಮ ಮುಖದ ಮೇಲೆ ನಗು ಮೂಡಿಸುತ್ತಿದೆ. ನಮ್ಮ ರಾಜ್ಯದಲ್ಲಿ 248 ಪಟ್ಟಣ ಸಹಕಾರ ಬ್ಯಾಂಕುಗಳಿದ್ದು, 1146 ಶಾಖೆಗಳನ್ನು ಹೊಂದಿವೆ. ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ 23,72,653 ಸದಸ್ಯರಿದ್ದಾರೆ. 8,314 ಜನ ಬ್ಯಾಂಕಿನಲ್ಲಿ ಉದ್ಯೋಗಿಗಳು ಸೇವೆ ಸಲ್ಲಿಸುತ್ತಿದ್ದಾರೆ. ನಮ್ಮ ಒಟ್ಟು ಠೇವಣಿ ರೂ.64,348 ಸಾವಿರ ಕೋಟಿ ದುಡಿಯುವ ಬಂಡವಾಳ ಹೊಂದಿ ಕೆಲಸ ಮಾಡುತ್ತಿವೆ. ಒಟ್ಟು ಎನ್‌ಪಿಎ ಶೇ.12.33 ಇದ್ದು, 248 ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ 100 ಬ್ಯಾಂಕುಗಳು ಶೇ.0% ನಿವ್ವಳ ಎನ್‌ಪಿಎ ಹೊಂದಿವೆ. ನಮ್ಮ ಕೀರ್ತಿ ಹೆಚ್ಚಿಸುವ ಕೆಲಸ ಮಾಡುತ್ತಿವೆ. ಮೊದಲು ರಿಜರ್ವ್ ಬ್ಯಾಂಕಿನವರು ನಮ್ಮನ್ನು ಗೌರವದಿಂದ ನೋಡುತ್ತಿರಲಿಲ್ಲ. ಆದರೆ, ಕಳೆದ ಐದು ವರ್ಷಗಳಿಂದ ನಮ್ಮನ್ನು ಬಹಳ ಗೌರವದಿಂದ ನೋಡುತ್ತಿದ್ದಾರೆ. ನಮ್ಮ ಬ್ಯಾಂಕುಗಳ ವಿಚಾರ ಬಂದಾಗ ನಾವು ಅಪ್ರಸ್ತುತ ಎನ್ನುತ್ತಿದ್ದರು. ನೀವು ಸಣ್ಣ ಸಣ್ಣ ಬ್ಯಾಂಕು ಇಟ್ಕೊಂಡು ಏನು ಮಾಡುತ್ತೀರಿ ಎನ್ನುತ್ತಿದ್ದರು. ನಾವು ಏನು ಕುಟುಂಬಕ್ಕೆ, ಸಂಸ್ಥೆಗೆ, ಕಂಪನಿಗೆ, ಎಂಟರ್‌ಪ್ರೈಸಸ್‌ಗೆ ಸಾಲ ಕೊಡುತ್ತೇವೆ. ಅದನ್ನು ಯಾವ ಬ್ಯಾಂಕಿನವರು ಕೊಡುವುದಿಲ್ಲ. ಗ್ರಾಹಕರಿಗೆ ರಕ್ಷಣೆ ಕೊಡಲು ನಮ್ಮ ಸರ್ಕಾರ ಕಾನೂನು ತಂದಿದೆ. ಇವತ್ತು ಹೊಸ ಬ್ಯಾಂಕುಗಳನ್ನು ಮಾಡಲಿಕ್ಕೆ ಅವಕಾಶವಿದೆ. ಶಾಖೆಗಳನ್ನು ತೆರೆಯಲಿಕ್ಕೆ ಆರ್‌ಬಿಐ ಅವಕಾಶ ಕಲ್ಪಿಸಿದೆ. ನಮ್ಮದೇ ಆದ ಅಂಬ್ರೆಲಾ ಅರ್ಗನೈಜೇಷನ್ ಸಂಸ್ಥೆಗೆ ಪರವಾನಿಗೆ ಕೊಟ್ಟಿದ್ದಾರೆ. ರೂ.321 ಕೋಟಿ ಷೇರು ಸಂಗ್ರಹಿಸಿದ್ದೇವೆ. ಅಮಿತ್ ಶಾ ಅವರ ವಿಶೇಷ ಆಸಕ್ತಿ, ನ್ಯಾಪಕಬ್‌ನ ಜ್ಯೋತೀಂದ್ರ ಮೆಹ್ತಾ ಮತ್ತು ನ್ಯಾಪಕಬ್‌ನ ಅಧ್ಯಕ್ಷ ಲಕ್ಷ್ಮೀದಾಸ್ ರವರ ಆಸಕ್ತಿ ಮೂಲಕ ಮುಂಬಯಿಯಲ್ಲಿ NUCFDC ಸ್ಥಾಪನೆಯಾಗಿದೆ. ಆರ್‌ಬಿಐನ ಹತ್ತಿರದಲ್ಲಿಯೇ ನಮ್ಮ NUCFDC ಬರುತ್ತಿದೆ. ಈಗ NUCFDCಯು ಡೆವಲಪಮೆಂಟ್ ಏಜೆನ್ಸಿಯಾಗಿದೆ. NUCFDCಗೆ ನಮ್ಮ ರಾಜ್ಯದ ಬಹಳ ಬ್ಯಾಂಕುಗಳು ಸದಸ್ಯತ್ವವನ್ನು ಹೊಂದಿಲ್ಲ. ರೂ.321 ಕೋಟಿಯಲ್ಲಿ ಕರ್ನಾಟಕದಿಂದ ರೂ.15 ಕೋಟಿ ಕೊಟ್ಟಿದ್ದಾರೆ. ಮಹಾರಾಷ್ಟ್ರದಲ್ಲಿ ಹೆಚ್ಚಿನ ಷೇರು ಕೊಟ್ಟಿದ್ದಾರೆ. ಮುಂಬಯಿನಲ್ಲಿ NUCFDC ಕಛೇರಿಯ ಉದ್ಘಾಟನೆಗೆ ಅಮಿತ್ ಶಾ ಬಂದಿದ್ದರು. ನಿಮ್ಮ ಆರ್ಥಿಕ ಶಕ್ತಿಯ ಹಾಗೆ ತಾವು NUCFDCಗೆ ಪ್ರೋತ್ಸಾಹ ಕೊಡಬೇಕು ಎಂದರು. ಈ ಅಂಬ್ರೆಲಾ ಸಂಸ್ಥೆಯ ಸದಸ್ಯತ್ವವನ್ನು ನಮ್ಮ ಎಲ್ಲ ಪಟ್ಟಣ ಸಹಕಾರ ಬ್ಯಾಂಕುಗಳು ಪಡೆದುಕೊಂಡಲ್ಲಿ ಖಂಡಿತವಾಗಿಯೂ ಪಟ್ಟಣ ಸಹಕಾರ ಬ್ಯಾಂಕುಗಳ ಬೆಳವಣಿಗೆಗೆ ಸಹಕಾರಿಯಾಗಲಿದೆ.

2026–27ನೇ ಸಾಲಿನಲ್ಲಿ ನಮ್ಮ ಮಹಾಮಂಡಳದ ಡೈಮಂಡ್ ಜ್ಯುಬಿಲಿ ಆಚರಿಸಬೇಕು ಎಂಬುದನ್ನು ಈ ಸಂದರ್ಭದಲ್ಲಿ ತಿಳಿಸುತ್ತಿದ್ದೇನೆ, ಇದಕ್ಕೆ ನಿಮ್ಮ ಒಪ್ಪಿಗೆ ಬೇಕಿದೆ ಎಂದರು. ಬೆಳಗಾವಿಯ ಮಹಾಮಂಡಳದ ಕಟ್ಟಡವನ್ನು ವೀಕ್ಷಣೆ ಮಾಡಿದ ನಮ್ಮ ಮಹಾಮಂಡಳದ ನಿರ್ದೇಶಕರುಗಳು ಕಟ್ಟಡ ತುಂಬಾ ಚೆನ್ನಾಗಿದೆ ಎಂದು ತಿಳಿಸಿದ್ದಾರೆ. ಈ ಬೆಳಗಾವಿಯ ಕಟ್ಟಡದ ನಿರ್ಮಾಣಕ್ಕೆ ಶ್ರೀ ಡಿ.ಟಿ. ಪಾಟೀಲರು ಕಾರಣಕರ್ತರಾಗಿದ್ದಾರೆ. ಬೆಳಗಾವಿ ಜಿಲ್ಲೆಯ ಪಟ್ಟಣ ಸಹಕಾರ ಬ್ಯಾಂಕುಗಳಿಂದ ಬಂದಂತಹ ಬಾಳಾಸಾಹೇಬ ಕಾಕತ್ಕರ, ವಿಜಯಕುಮಾರ ಅಂಗಡಿ ಮುಂತಾದವರು ಸೇರಿ ಈ ಬೆಳಗಾವಿ ಕಟ್ಟಡದಲ್ಲಿ ವಿಚಾರ ಸಂಕಿರಣ, ಕಾರ್ಯಾಗಾರಗಳನ್ನು ಏರ್ಪಡಿಸಲು ಮುಂದಾಗಬೇಕು. ಇದರಿಂದ ಆ ಭಾಗದ ಪಟ್ಟಣ ಸಹಕಾರ ಬ್ಯಾಂಕುಗಳ ಬೆಳವಣಿಗೆಗೆ ಸಹಕಾರಿಯಾಗುತ್ತದೆ ಎಂದರು. ನಿರ್ದೇಶಕರ 10 ವರ್ಷಗಳ ಕಾಲಾವಧಿಯ ಕುರಿತು ಮಹಾಮಂಡಳ ಹಾಗೂ 17 ಪಟ್ಟಣ ಸಹಕಾರ ಬ್ಯಾಂಕುಗಳು ಉಚ್ಚನ್ಯಾಯಾಲಯದಲ್ಲಿ ದಾವೆ ಹೂಡಿವೆ. ಮಹಾರಾಷ್ಟ್ರ ಸರ್ಕಾರ ಇದರ ಬಗ್ಗೆ ಒಂದು ಸುತ್ತೋಲೆಯನ್ನು ಹೊರಡಿಸಿದೆ. ನಮ್ಮ ರಾಜ್ಯದಲ್ಲಿಯೂ ಸಹ ಒಂದು ಸುತ್ತೋಲೆಯನ್ನು ಹೊರಡಿಸಬೇಕಿದೆ

3ನೇ ಪುಟಕ್ಕೆ...

2 ರೂ. 2,000ಕ್ಕಿಂತಲೂ ಹೆಚ್ಚಿನ ಯುಪಿಐ ಪಾವತಿಗಳಿಗೆ ಶೇ.0.4ರಷ್ಟು ಶುಲ್ಕ ಹೊಸ ನಿಯಮ ಪ್ರಕಟ ಅಕ್ಟೋಬರ್ 15 ರಿಂದ ಜಾರಿ

5 ಮೈಸೂರು ಕೋ-ಆಪರೇಟಿವ್ ಬ್ಯಾಂಕಿನ ವತಿಯಿಂದ ಶ್ರೀ ಜಿ.ಟಿ. ದೇವೇಗೌಡರಿಗೆ ಸನ್ಮಾನ

7 ನಿಮ್ಮ ಪ್ರಶ್ನೆ ನಮ್ಮ ಉತ್ತರ

## ಸಂಪಾದಕೀಯ

## ಆತ್ಮೀಯ ಸಹಕಾರಿಗಳೇ...



### ಇತ್ತೀಚಿನ ವರ್ಷಗಳಲ್ಲಿ ರಿಜರ್ವ್ ಬ್ಯಾಂಕಿನವರು ನಮ್ಮನ್ನು ಬಹಳ ಗೌರವದಿಂದ ಕಾಣುತ್ತಿದ್ದಾರೆ

ನಮ್ಮ ಮಹಾಮಂಡಳದ 61ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಉತ್ಸಾಹದಿಂದ ಭಾಗವಹಿಸಿದ್ದ ನಿಮ್ಮನ್ನೆಲ್ಲ ನೋಡಿ ಸಂತೋಷವಾಯಿತು. ಈ ಬಾರಿಯ ಮಹಾಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳು ಭಾಗವಹಿಸಿದ್ದು ನಿಜಕ್ಕೂ ಸಂತಸ ಉಂಟು ಮಾಡಿತು.

ಮಹಾಮಂಡಳದ ಸದಸ್ಯರಾದ ನಿಮಗೆಲ್ಲಾ ಗೊತ್ತಿರುವ ಹಾಗೆ, ರಾಜ್ಯದಲ್ಲಿರುವ ಪಟ್ಟಣ ಸಹಕಾರ ಬ್ಯಾಂಕುಗಳು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿವೆ ಹಾಗೂ ತೃಪ್ತಿಕರ ಠೇವಣಿ ಸಂಗ್ರಹ ಹೊಂದಿವೆ. ಅಲ್ಲದೆ, ವಿವಿಧ ಉದ್ದೇಶಗಳಿಗೆ ಕೋಟ್ಯಾಂತರ ರೂಪಾಯಿ ಸಾಲಗಳನ್ನು ನೀಡಿ, ಪ್ರಸ್ತುತ ಆರ್ಥಿಕ ವರ್ಷದಲ್ಲಿ ನಿವ್ವಳ ಲಾಭಗಳಿಸಿ, ಸದಸ್ಯರಿಗೆ ಉತ್ತಮ ಲಾಭಾಂಶವನ್ನು ವಿತರಿಸುತ್ತಿವೆ. ಒಟ್ಟಾರೆ, ನಮ್ಮ ಪಟ್ಟಣ ಸಹಕಾರ ಬ್ಯಾಂಕಿಂಗ್ ವಲಯದ ಬೆಳವಣಿಗೆ ಕಳೆದ ನಾಲ್ಕೈದು ವರ್ಷಗಳಲ್ಲಿ ನಮ್ಮ-ನಿಮ್ಮೆಲ್ಲರ ಹಾಗೂ ನಮ್ಮ ಬ್ಯಾಂಕುಗಳ ಗ್ರಾಹಕರ ಮುಖದ ಮೇಲೆ ನಗು ಮೂಡಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ.

ನಮ್ಮ ಬಹುತೇಕ ಬ್ಯಾಂಕುಗಳು ಪ್ರಗತಿ ಪಥದಲ್ಲಿ ಸಾಗುತ್ತಿದ್ದು, ಶೂನ್ಯ ಅನುತ್ಪಾದಕ ಆಸ್ತಿ ಹೊಂದಿವೆ. ಅನೇಕ ಪಟ್ಟಣ ಸಹಕಾರ ಬ್ಯಾಂಕುಗಳು ನೂತನ ಶಾಖೆಯನ್ನು ತೆರೆದಿವೆ, ಅಥವಾ ಈ ದಿಸೆಯಲ್ಲಿ ಕಾರ್ಯಪ್ರವೃತವಾಗಿವೆ. ದೇಶದಲ್ಲಿ ಈ ರೀತಿಯಾಗಿ ಕಳೆದ ವರ್ಷದ ನಮ್ಮ ಸಾಧನೆ ಅತ್ಯುತ್ತಮವಾಗಿದೆ ಎಂದು ಹೆಮ್ಮೆಯಿಂದ ಹೇಳಬಯಸುತ್ತೇನೆ.

ನಿಮ್ಮೆಲ್ಲರ ಸಹಕಾರದಿಂದ ನಮ್ಮ ಮಹಾಮಂಡಳದ ಕಾರ್ಯಕ್ಷಮತೆ ಉತ್ತಮವಾಗಿ ಸಾಗುತ್ತಿದ್ದು, ಈ ಕುರಿತು ರಿಜರ್ವ್ ಬ್ಯಾಂಕ್ ಕೂಡ ಮೆಚ್ಚುಗೆ ವ್ಯಕ್ತಪಡಿಸಿದೆ. ಈ ಹಿಂದೆ ರಿಜರ್ವ್ ಬ್ಯಾಂಕಿನವರು ನಮಗೆ ಗೌರವ ಕೊಡುತ್ತಿರಲಿಲ್ಲ. ಆದರೆ, ಇತ್ತೀಚಿನ ವರ್ಷಗಳಲ್ಲಿ ನಮ್ಮನ್ನು ಬಹಳ ಗೌರವದಿಂದ ಕಾಣುತ್ತಿದ್ದಾರೆ. ರಿಜರ್ವ್ ಬ್ಯಾಂಕ್ ನಮ್ಮ ವಿಷಯದಲ್ಲಿ ಇನ್ನೂ ತುಸು ಮೃದು ಧೋರಣೆ ತಳೆದಲ್ಲಿ ನಾವು ಹೆಚ್ಚಿನ ಪ್ರಗತಿ ಸಾಧಿಸಲು ಸಾಧ್ಯ ಎಂದು ಹೇಳಬಯಸುತ್ತೇನೆ.

ಇನ್ನೊಂದು, ಇಂದಿನ ಪೈಪೋಟಿಯ ದಿನಗಳಲ್ಲಿ ನಮ್ಮ ಸಹಕಾರ ಬ್ಯಾಂಕುಗಳು ಇನ್ನೂ ಹೆಚ್ಚಿನ ಪ್ರಗತಿ ಸಾಧಿಸುವ ಸಲುವಾಗಿಯೇ, ಆಡಳಿತ ಮಂಡಳಿಯ ಸದಸ್ಯರಿಗೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ, ಸಿಬ್ಬಂದಿಗಳಿಗೆ ಅಗತ್ಯವಿರುವ ಹಲವು ಬಗೆಯ ಶಿಕ್ಷಣ ತರಬೇತಿ ಕಾರ್ಯಕ್ರಮಗಳನ್ನು ನುರಿತ ವಿಷಯ ತಜ್ಞರಿಂದ ಮಹಾಮಂಡಳ ಆಯೋಜಿಸುತ್ತಿದೆ.

ಇನ್ನೊಂದು, ಸುಮಾರು ವರ್ಷಗಳಿಂದ ನನ್ನ ಮತ್ತು ಇತರ ಹಿರಿಯ ಸಹಕಾರಿಗಳ ಪ್ರಯತ್ನದ ಫಲವಾಗಿ ಅಂಬ್ರೆಲಾ ಅರ್ಗನೈಜೇಷನ್‌ಗೆ ರಿಜರ್ವ್ ಬ್ಯಾಂಕಿನ ಮನ್ನಣೆ ದೊರೆತಿದೆ. ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರ ವಿಶೇಷ ಆಸಕ್ತಿ, ನ್ಯಾಪಕಬ್‌ನ ಜ್ಯೋತೀಂದ್ರ ಮೆಹ್ತಾ ಮತ್ತು ನ್ಯಾಪಕಬ್‌ನ ಅಧ್ಯಕ್ಷ ಲಕ್ಷ್ಮೀದಾಸ್ ರವರ ವಿಶೇಷ ಆಸಕ್ತಿಯಿಂದಾಗಿ ಮುಂಬಯಿಯಲ್ಲಿ NUCFDC ಸ್ಥಾಪನೆಯಾಗಿದೆ. ನಮ್ಮ ರಾಜ್ಯದ ಬಹಳಷ್ಟು ಬ್ಯಾಂಕುಗಳು NUCFDC ಸದಸ್ಯತ್ವವನ್ನು ಪಡೆದುಕೊಂಡಿರುವುದಿಲ್ಲ ಕೇವಲ ರೂ.321 ಕೋಟಿ ಷೇರು ಸಂಗ್ರಹವಾಗಿದ್ದು, ಇದು ಹೆಚ್ಚಾಗಬೇಕಿದೆ. ದೇಶದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಉನ್ನತಿಕರಣಕ್ಕಾಗಿ ಅಂಬ್ರೆಲಾ ಅರ್ಗನೈಜೇಷನ್ ಕಾರ್ಯನಿರ್ವಹಿಸುತ್ತದೆ ಎಂದು ಹೇಳಬಯಸುತ್ತೇನೆ. ಇದಕ್ಕೆ ನಿಮ್ಮೆಲ್ಲರ ಸಹಕಾರ ಇರಲಿ ಎಂದು ಅಪೇಕ್ಷಿಸುತ್ತೇನೆ.

▸▸ ಎಚ್.ಕೆ. ಪಾಟೀಲ

### ರೂ. 2,000ಕ್ಕಿಂತಲೂ ಹೆಚ್ಚಿನ ಯುಪಿಐ ಪಾವತಿಗಳಿಗೆ ಶೇ.0.4ರಷ್ಟು ಶುಲ್ಕ ಹೊಸ ನಿಯಮ ಪ್ರಕಟ ಅಕ್ಟೋಬರ್ 15 ರಿಂದ ಜಾರಿ

**ಹೊಸದಿಲ್ಲಿ:** ದೇಶದಲ್ಲಿ ಯುಪಿಐ ಡಿಜಿಟಲ್ ಪಾವತಿ ವ್ಯವಸ್ಥೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮಹತ್ವದ ನೀತಿಯೊಂದನ್ನು ಪ್ರಕಟಿಸಿದೆ. ಇನ್ನುಂದೆ ರೂ. 2000 ಕ್ಕಿಂತ ಹೆಚ್ಚಿನ ಮೌಲ್ಯದ ವಾಣಿಜ್ಯ ವಹಿವಾಟುಗಳಿಗೆ ವರ್ತಕರಿಂದ ಶೇಕಡಾ 0.4 ರಷ್ಟು 'ಮರ್ಚೆಂಟ್ ಡಿಸ್ಕೌಂಟ್ ರೇಟ್' ಶುಲ್ಕ ವಿಧಿಸಲು ನಿರ್ಧರಿಸಲಾಗಿದೆ. ಆದರೆ, ಸಾಮಾನ್ಯ ಗ್ರಾಹಕರಿಗೆ ಇದರಿಂದ ಯಾವುದೇ ಹೊರೆಯಾಗುವುದಿಲ್ಲ. ಸಾರ್ವಜನಿಕರಿಗೆ ಯುಪಿಐ ಸೇವೆ ಎಂದಿನಂತೆ ಸಂಪೂರ್ಣ ಉಚಿತವಾಗಿರಲಿದೆ. ಈ ನೂತನ ನಿಯಮಾವಳಿಗಳು 2026ರ ಅಕ್ಟೋಬರ್ 15ರಿಂದ ಅಧಿಕೃತವಾಗಿ ಜಾರಿಗೆ ಬರಲಿವೆ.

#### ಶುಲ್ಕದ ಲೆಕ್ಕಾಚಾರ ಹೇಗೆ?

ಗ್ರಾಹಕರು ಅಂಗಡಿ-ಮುಂಗಟ್ಟುಗಳಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಮಾಡುವ ರೂ. 2,000ಕ್ಕಿಂತ ಹೆಚ್ಚಿನ ಪಾವತಿಗಳಿಗೆ ವರ್ತಕರು ತಮ್ಮ ಬ್ಯಾಂಕ್‌ಗಳಿಗೆ ಶೇ. 0.4 ರಷ್ಟು ಶುಲ್ಕ ತೆರಬೇಕಾಗುತ್ತದೆ.

**ರೂ. 3,000 ಪಾವತಿಗೆ: ವರ್ತಕರು ರೂ. 12 ಶುಲ್ಕ ನೀಡಬೇಕು.**

- **ರೂ. 50,000 ಪಾವತಿಗೆ:** ರೂ.200 ಶುಲ್ಕ ಕಡಿತವಾಗಲಿದೆ.
- **ಗರಿಷ್ಠ ಮಿತಿ:** ರೂ. 75,000 ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತದ ವಹಿವಾಟುಗಳಿಗೆ ಗರಿಷ್ಠ ಮಿತಿಯಾಗಿ 300 ರೂ. ಮಾತ್ರ ಶುಲ್ಕ ನಿಗದಿಪಡಿಸಲಾಗಿದೆ. ಉದಾಹರಣೆಗೆ 1 ಲಕ್ಷದ ರೂ. ವಹಿವಾಟಿಗೆ ಶೇ. 0.4 ರ ಪ್ರಕಾರ ರೂ. 400 ಆಗಬೇಕಿದ್ದರೂ, ಗರಿಷ್ಠ ಮಿತಿ ಇರುವುದರಿಂದ ರೂ. 300 ಮಾತ್ರ ಕಡಿತವಾಗುತ್ತದೆ.

#### ಗ್ರಾಹಕರಿಗೆ ಪೂರ್ಣ ವಿನಾಯಿತಿ: ಪೈಸೆ ಕಡಿತವೂ ಇಲ್ಲ!

- **ಗ್ರಾಹಕರ ಮೇಲೆ ಹೊರೆ ಹಾಕುವಂತಿಲ್ಲ:** ವರ್ತಕರು ಈ ಶುಲ್ಕವನ್ನು ಗ್ರಾಹಕರಿಂದ ವಸೂಲಿ ಮಾಡುವಂತಿಲ್ಲ. ಗ್ರಾಹಕರು ಖರೀದಿಸಿದ ವಸ್ತು ಅಥವಾ ಸೇವೆಗೆ ನಿಗದಿತ ಬೆಲೆಯನ್ನು ಮಾತ್ರ ಪಾವತಿಸುತ್ತಾರೆ.
- **ಆ್ಯಪ್ ಶುಲ್ಕಕ್ಕೂ ನಿರ್ಬಂಧ :** ಫೋನ್‌ಪೇ, ಗೂಗಲ್ ಪೇ ಸೇರಿದಂತೆ ಯಾವುದೇ ಯುಪಿಐ ಆ್ಯಪ್‌ಗಳು ಗ್ರಾಹಕರ ಮೇಲೆ ಪ್ಲಾಟ್‌ಫಾರ್ಮ್ ಶುಲ್ಕ ವಿಧಿಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.
- **ಸ್ನೇಹಿತರು-ಕುಟುಂಬಕ್ಕೆ ಹಣ ಕಳುಹಿಸುವುದು ಉಚಿತ:** ವ್ಯಕ್ತಿಯಿಂದ ವ್ಯಕ್ತಿಗೆ ಹಣ ವರ್ಗಾವಣೆ, ಸ್ವಂತ ಖಾತೆಗಳ ನಡುವಿನ ವರ್ಗಾವಣೆಗಳಿಗೆ ಯಾವುದೇ ಶುಲ್ಕವಿರುವುದಿಲ್ಲ.

#### ಸಣ್ಣ ವ್ಯಾಪಾರಿಗಳು ಮತ್ತು ಬಡವರಿಗೆ ನೆಮ್ಮದಿ

- **ರೂ. 2,000 ಒಳಗಿನ ಪಾವತಿಗೆ ಶುಲ್ಕವಿಲ್ಲ:** ದೇಶದಲ್ಲಿ ನಡೆಯುವ ಶೇಕಡ 95ಕ್ಕೂ ಹೆಚ್ಚು ಯುಪಿಐ ವಹಿವಾಟುಗಳು ರೂ. 2,000 ಕ್ಕಿಂತ ಕಡಿಮೆ ಮೊತ್ತದ್ದಾಗಿದ್ದು, ಇವುಗಳಿಗೆ ಯಾವುದೇ ಶುಲ್ಕ ಇರುವುದಿಲ್ಲ.

...1ನೇ ಪುಟದಿಂದ



ಎಂದರು. ಆರ್‌ಬಿಐನವರು ಏನು ಕಾನೂನು ಮಾಡಿದ್ದಾರೆ. ಅದನ್ನು ಮಲ್ಟಿ ಸ್ಟೇಟ್ ಕೋ-ಆಪರೇಟಿವ್ ಬ್ಯಾಂಕುಗಳಿಗೆ ಮಾಡಿ. ನಮ್ಮ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಮಾಡಬೇಡಿ ಎಂದು ನಾವು ಒತ್ತಾಯಿಸಿದ್ದೇವೆ,

ಹಿಂದೆ ನಮ್ಮ ದಾವಾ ಪಂಚಾಯ್ತಿ ನ್ಯಾಯಾಲಯದಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಕರು ಬೇಗ ಬೇಗ ದಾವೆಗಳನ್ನು ಮುಕ್ತಾಯಗೊಳಿಸಿ, ಪಟ್ಟಣ ಸಹಕಾರ ಬ್ಯಾಂಕುಗಳ ಎನ್‌ಪಿಎ ಪ್ರಮಾಣ ಕಡಿಮೆಯಾಗಲು ಕಾರಣರಾಗಿದ್ದಾರೆ. ಆದ್ದರಿಂದ ದಾವೆಗಳನ್ನು ತಾವು ಬೇಗ ಬಗೆಹರಿಸಬೇಕು.

ಎರಡನೆಯದಾಗಿ ಸಿಬ್ಬಂದಿ ಸೇವಾ ವಿಷಯಕ್ಕೆ ಸಂಬಂಧಪಟ್ಟ ದಾವೆಗಳಿವೆ. ಅವು ಸಂಸ್ಥೆಯೊಂದಿಗೆ ಒಂದು ಅಶಿಸ್ತನ್ನು ಮೂಡಿಸಿವೆ. ಅವುಗಳನ್ನು ಬೇಗ ಬೇಗ ಮುಗಿಸಬೇಕು ಎಂದು ಮಹಾಮಂಡಳದ ದಾವಾ ಪಂಚಾಯ್ತಿ ನ್ಯಾಯಾಲಯದ ಅಪರ ನಿಬಂಧಕರಿಗೆ ತಿಳಿಸಿದರು. ಈಗ ಬಹಳ ಜನ SURFAESIಗೆ ಹೋಗುತ್ತಿದ್ದಾರೆ. ತಾವು ವಿಶೇಷ ಆಸಕ್ತಿ ವಹಿಸಿ ಮಹಾಮಂಡಳದ ಘನತೆ ಹೆಚ್ಚಿಸಬೇಕು ಎಂದರು.

ಮಹಾಸಭೆಯಲ್ಲಿ ನ್ಯಾಪಕಬ್‌ನ ಅಧ್ಯಕ್ಷರಾದ ಶ್ರೀ ಲಕ್ಷ್ಮಿದಾಸ್ ರವರ ಸಂಪಾದಕತ್ವದ ಆರ್‌ಬಿಐ ಮಾಸ್ಟರ್ ಗೈಡ್‌ಲೈನ್ ಪುಸ್ತಕವನ್ನು ಮಹಾಮಂಡಳದ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಡಿ.ಟಿ. ಪಾಟೀಲರವರು ಬಿಡುಗಡೆಗೊಳಿಸಿದರು. ಪಟ್ಟಣ ಸಹಕಾರ ಬ್ಯಾಂಕುಗಳ ನಿರ್ದೇಶಕರುಗಳಿಗೆ 3 ತಿಂಗಳ ತರಬೇತಿ ಕುರಿತು ಮಾಹಿತಿ ಪುಸ್ತಕವನ್ನು ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯ ನವರು ಬಿಡುಗಡೆಗೊಳಿಸಿದರು. 61ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಅಗಲಿದ ಗಣ್ಯರು, ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರುಗಳಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಸಭೆಯಲ್ಲಿ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರು ವಿಷಯವನ್ನು ಮಂಡಿಸಿದರು. ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಈ ಮಹಾಸಭೆಯಲ್ಲಿ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಿ.ಎಸ್.ಪರಮಶಿವಯ್ಯ, ನಿರ್ದೇಶಕರುಗಳಾದ ಶ್ರೀ ಡಿ.ಟಿ. ಪಾಟೀಲ, ಶ್ರೀ ರಮೇಶ್ ಬಾಬು, ಶ್ರೀ ಎಸ್.ಬಿ.ಎಂ. ಮಂಜು, ಶ್ರೀ ಎಂ.ಕೆ.ಪಟ್ಟಣಶೆಟ್ಟಿ, ಶ್ರೀ ಎಮ್.ಎಮ್.ಮೆಟಗುಡ್ಡ, ಶ್ರೀ ಎನ್.ಎಂ. ಸುರೇಶ್, ಶ್ರೀ ಎಚ್. ಜಯಪ್ರಕಾಶ್ ಕೆದ್ಲಾಯ, ಶ್ರೀ ರಾಜನಹಳ್ಳಿ ಜಿ. ಶ್ರೀನಿವಾಸಮೂರ್ತಿ, ಶ್ರೀಮತಿ ಬನಶಂಕರಿ ಹೆಚ್.ಆರ್., ಶ್ರೀ ಆನಂದಗೌಡ ಎನ್. ಬಿರಾದಾರ, ವಿಶೇಷ ಆಹ್ವಾನಿತರಾದ ಶ್ರೀ ರಘುನಾಥ ಸಿ., ಶ್ರೀ ಪ್ರಕಾಶ ಜಿ. ಪಾಟೀಲ, ಶ್ರೀ ರಾಜಶೇಖರ ವಿ. ಶೀಲವಂತ, ಶ್ರೀ ಎಣ್ಣೆಗೆರೆ ಆರ್.ವೆಂಕಟರಾಮಯ್ಯ, ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ಎಸ್. ಚಂದ್ರಮೌಳಿ, ಶ್ರೀ ಶಿವಕುಮಾರ ಗುರುಬಸಪ್ಪ ಗುಂದಗಿ, ಶ್ರೀ ಅಂಬೋರೆ ಪಿ. ಸತೀಶ್, ಶ್ರೀ ವಿಜಯಕುಮಾರ ಅ. ಪಾಟೀಲ, ಶ್ರೀ ರೇವಣಸಿದ್ದಪ್ಪ ಜಿ. ಕಲ್ಬುರ್ಗಿ, ಮಹಾಮಂಡಳದ ಉಪಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್.ಕಿರೇಸೂರ ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಮಹಾಮಂಡಳದ ನಿರ್ದೇಶಕರಾದ ಶ್ರೀಮತಿ ಮಲ್ಲಮ್ಮಾ ಶಿ. ಯಾಳವಾರ ಸ್ವಾಗತಿಸಿದರು. ಶ್ರೀ ಷಣ್ಮುಖಪ್ಪ ಮುಚ್ಚಂಡಿ ಕಾರ್ಯಕ್ರಮ ನಿರೂಪಿಸಿದರು. ಕೊನೆಯಲ್ಲಿ ಮಹಾಮಂಡಳದ ನಿರ್ದೇಶಕರಾದ ಶ್ರೀ ಎಂ.ಆರ್. ವೆಂಕಟೇಶ್ ರವರು ವಂದನಾರ್ಪಣೆ ಸಲ್ಲಿಸಿದರು. ಮಹಾಸಭೆಯಲ್ಲಿ 170ಕ್ಕೂ ಹೆಚ್ಚು ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

# ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ ಲಿಖಿತ ಪರೀಕ್ಷೆಗಳು ಪ್ರಾರಂಭ

**ಬೆಂಗಳೂರು:** 13ನೇ ಬ್ಯಾಚಿನ ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ ಲಿಖಿತ ಪರೀಕ್ಷೆಗಳು ದಿನಾಂಕ : 26.09.2026, 27.09.2026 ಮತ್ತು 10.10.2026ರಂದು ಮೂರು ದಿನಗಳ ಕಾಲ ಹಾಗೂ ಮೌಖಿಕ ಪರೀಕ್ಷೆ ದಿನಾಂಕ:11.10.2026ರಂದು ಒಂದು ದಿನ ಆರ್‌ಐಸಿಎಂ, ನಂ.67, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು-560070 ಇಲ್ಲಿ ಜರುಗಲಿವೆ. 13ನೇ ಬ್ಯಾಚಿನ ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್‌ಗೆ ಸೇರಿದ ಪಟ್ಟಣ ಸಹಕಾರ ಬ್ಯಾಂಕುಗಳ ಅಭ್ಯರ್ಥಿಗಳು ತಪ್ಪದೇ ಈ ಲಿಖಿತ ಪರೀಕ್ಷೆಗಳು ಹಾಗೂ ಮೌಖಿಕ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕೆಂದು ಈ ಮೂಲಕ ಕೋರಲಾಗಿದೆ. 12ನೇ ಬ್ಯಾಚಿನಲ್ಲಿ ಅನುತ್ತೀರ್ಣಗೊಂಡಿರುವ ಅಭ್ಯರ್ಥಿಗಳು ಈ ಪರೀಕ್ಷೆಗೆ ಹಾಜರಾಗಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಹಾಮಂಡಳದ ಉಪಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್. ಕಿರೇಸೂರ (ಮೊ:7411332655) ಮತ್ತು ಅಧಿಕಾರಿ ಶ್ರೀ ರಮೇಶ್ ಎನ್ (ಮೊ:9448003167) ರವರುಗಳನ್ನು ಸಂಪರ್ಕಿಸಬಹುದಾಗಿದೆ.

# ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ



ತುಮಕೂರು ವೈಶ್ಯ ಕೋ-ಆಪರೇಟಿವ್ ಬ್ಯಾಂಕಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎನ್. ಗೋವಿಂದರಾಜು ರವರು ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರಿಗೆ ಸಲ್ಲಿಸಿದರು.



ತುಮಕೂರಿನ ಸಿದ್ದಗಂಗಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ನಿರ್ದೇಶಕರಾದ ಶ್ರೀ ಬಿ.ಎಸ್. ರುದ್ರೇಶಯ್ಯ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಹೆಚ್.ಕೆ. ಶಿವಪ್ರಕಾಶ್ ರವರು ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರಿಗೆ ಸಲ್ಲಿಸಿದರು.



ಉಡುಪಿ ಕೋ-ಆಪರೇಟಿವ್ ಟೌನ್ ಬ್ಯಾಂಕಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಚ್.ಜಯಪ್ರಕಾಶ್ ಕೆದ್ಲಾಯ ರವರು ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರಿಗೆ ಸಲ್ಲಿಸಿದರು.



ದಿ ಸಿಂದಗಿ ಪಟ್ಟಣ ಸಹಕಾರ ಬ್ಯಾಂಕಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಶರಣಪ್ಪ ಎಸ್. ವಾರದ ರವರು ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರಿಗೆ ಸಲ್ಲಿಸಿದರು.



ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ರಾಜಶೇಖರ್ ಎನ್. ರವರು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಮಂಡಲೀಕ ಎನ್. ಕೇರೂರೆಯವರಿಗೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀ ಟಿ.ಆರ್. ಜಗದೀಶ ರವರು ಉಪಸ್ಥಿತರಿದ್ದರು.

# ಮೈಸೂರು ಕೋ-ಆಪರೇಟಿವ್ ಬ್ಯಾಂಕಿನ ವತಿಯಿಂದ ಶ್ರೀ ಜಿ.ಟಿ. ದೇವೇಗೌಡರಿಗೆ ಸನ್ಮಾನ



**ಮೈಸೂರು:** ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿ ಏಳನೇ ಬಾರಿ ಅಧಿಕಾರ ಸ್ವೀಕರಿಸಿದ ಮಾಜಿ ಸಚಿವರು ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಶ್ರೀ ಜಿ.ಟಿ. ದೇವೇಗೌಡರವರನ್ನು ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ವತಿಯಿಂದ ಗೌರವಿಸಲಾಯಿತು ಅಧ್ಯಕ್ಷರಾದ ಜೆ.ಯೋಗೇಶ್, ಉಪಾಧ್ಯಕ್ಷ ಟಿ.ರವಿ ನಿರ್ದೇಶಕರಾದ ಎನ್. ಯೋಗಾನಂದ್, ಹೆಚ್. ಹರೀಶ್‌ಕುಮಾರ್, ರಾಜಕೀಯ ರವಿಕುಮಾರ್, ಆರ್. ಸೋಮಣ್ಣ, ಕೆ. ಗಿರೀಶ್, ಪಡುವಾರಹಳ್ಳಿ ಎಂ. ರಾಮಕೃಷ್ಣ, ಪಿ. ರಾಜೇಶ್ವರಿ, ಪ್ರಮಿಳಾ, ಕಾರ್ಯದರ್ಶಿ ಕೆ. ಹರ್ಷಿತ್ ಗೌಡ ರವರಿದ್ದಾರೆ.

# ಸೌಭಾಗ್ಯ ಮಹಿಳಾ ಸೌಹಾರ್ದ ಸಹಕಾರಿ ಬ್ಯಾಂಕಿನ 29ನೇ ವಾರ್ಷಿಕ ಸಾಮಾನ್ಯ ಮಹಾಸಭೆ : ರೂ.42.03 ಲಕ್ಷ ಲಾಭ ಗಳಿಸಿದೆ



**ಗದಗ :** ಸೌಭಾಗ್ಯ ಮಹಿಳಾ ಸೌಹಾರ್ದ ಸಹಕಾರಿ ಬ್ಯಾಂಕಿನ 29ನೇ ವಾರ್ಷಿಕ ಸಾಮಾನ್ಯ ಮಹಾಸಭೆಯು ನಮ್ಮ ಬ್ಯಾಂಕಿನ ಆವರಣದಲ್ಲಿ ದಿನಾಂಕ:26.07.2026ರಂದು ಜರುಗಿತು.

ಬ್ಯಾಂಕಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅಧ್ಯಕ್ಷಣಿಯರಾದ ಶ್ರೀಮತಿ ವೀಣಾ ಎ ಪೊತ್ನಿಸ್ ಅಧ್ಯಕ್ಷತೆ ವಹಿಸಿ ಸದಸ್ಯರನ್ನು ಸ್ವಾಗತಿಸಿ ಬ್ಯಾಂಕಿನ ಪ್ರಗತಿಯ ಬಗ್ಗೆ ಪ್ರಸ್ತಾವನೆಗೈದು ವರದಿ ಮಂಡಿಸಿದರು. ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಬಸವಣ್ಣೆ ಎಮ್ ಹಂಡಿ ಅವರು ಸಾಮಾನ್ಯ ಮಹಾಸಭೆಯ ನಡಾವಳಿಯನ್ನು ಮಂಡಿಸಿದರು.

ದಿನಾಂಕ: 31.03.2026ಕ್ಕೆ ಬ್ಯಾಂಕಿನಲ್ಲಿ ಒಟ್ಟು 4466 ಸದಸ್ಯರಿದ್ದು, ರೂ.1.29 ಕೋಟಿ ಶೇರು ಬಂಡವಾಳವನ್ನು ಹೊಂದಿದ್ದು, ಬ್ಯಾಂಕಿನ ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು ರೂ.4.81ಕೋಟಿ ಇರುತ್ತದೆ. ಸದಸ್ಯರು ಹಾಗೂ ಗ್ರಾಹಕರಿಂದ ರೂ.34.17 ಕೋಟಿ ಠೇವಣಿ ಪಡೆಯಲಾಗಿದ್ದು, ಇದರಿಂದ ರೂ.20.17 ಕೋಟಿ ಸಾಲವನ್ನು ಕೊಡಲಾಗಿದೆ. 2025–2026ನೇ ಸಾಲಿನಲ್ಲಿ ನಮ್ಮ ಬ್ಯಾಂಕಿನ ದುಡಿಯುವ ಬಂಡವಾಳ ರೂ.39.11 ಕೋಟಿ ಇದ್ದು, ರಿಸರ್ವ್ ಬ್ಯಾಂಕಿನ ನಿಯಮಗಳಿಗನುಸಾರವಾಗಿ ಬ್ಯಾಂಕು ಬಂಡವಾಳ ಹೂಡಿಕೆ ಮಾಡುತ್ತಿದ್ದು ರೂ.18.55 ಕೋಟಿ GOVERNMENT SECURITIESನಲ್ಲಿ ಹೂಡಿಕೆ ಮಾಡಲಾಗಿದೆ. ನಮ್ಮ ಬ್ಯಾಂಕಿನ ನಿವ್ವಳ ಅನುತ್ಪಾದಕ ಆಸ್ತಿಗಳು 0% ಇದೆ ಮತ್ತು ಲಾಭದ ಗಳಿಕೆಯಲ್ಲಿ ವರ್ಷದಿಂದ ವರ್ಷಕ್ಕೆ ಪ್ರಗತಿ ಸಾಧಿಸಿದ್ದು, ವರ್ಷಾಂತ್ಯಕ್ಕೆ ನಮ್ಮ ಬ್ಯಾಂಕಿನ ಲಾಭದ ಗಳಿಕೆಯು ರೂ.42.03 ಲಕ್ಷ ಲಾಭ ಗಳಿಸಿದೆ. ನಮ್ಮ ಬ್ಯಾಂಕಿನ ಸನ್ನದು ಲೆಕ್ಕ ಪರಿಶೋಧಕರಾದ ಮೆ॥ ನಾಗದೀಪ ಸತ್ಯನಾರಾಯಣ & ಕಂ. ಇವರಿಂದ "ಎ" ಶ್ರೇಣಿ ಪಡೆದಿರುತ್ತದೆ. ಬ್ಯಾಂಕು ತನ್ನ ಸದಸ್ಯರಿಗೆ 10% ಲಾಭಾಂಶವನ್ನು ಘೋಷಿಸಿದೆ.

ಬ್ಯಾಂಕಿನ ಉಪಾಧ್ಯಕ್ಷರಾದ ಸುಷ್ಮಾ ಆರ್ ಹುಲಕೋಟಿ ಹಾಗೂ ನಿರ್ದೇಶಕರುಗಳಾದ ಶ್ರೀಮತಿ ಜಾನಕಿ ಎಸ್ ಮಲ್ಲಾಪುರ, ಶ್ರೀಮತಿ ನಂದಾ ಬಿ ಹುಲಕೋಟಿ, ಶ್ರೀಮತಿ ಶಶಿಕಲಾ ಪಿ ಭಾರದ್ವಾಡ, ಶ್ರೀಮತಿ ವಿದ್ಯಾ ಆರ್ ಹಬೀಬ, ಶ್ರೀಮತಿ ರೇಷ್ಮಾ ನಾಗರಕಟ್ಟಿ, ಶ್ರೀಮತಿ ಮೀನಾಕ್ಷಿ ಮಲ್ಲಾಡದ, ಶ್ರೀಮತಿ ಮೀನಾಕ್ಷಿ ಬೆನಕಣ್ಣವರ, ಶ್ರೀಮತಿ ರೇಷ್ಮಾ ಬಸರಿಗಿಡದ, ಶ್ರೀಮತಿ ಕಲಾವತಿ ಕಲ್ಲೇರ, ಶ್ರೀಮತಿ ನೀಲಮ್ಮ ಬೋಳಣ್ಣವರ, ವೃತ್ತಿಪರ ನಿರ್ದೇಶಕರಾದ ಶ್ರೀಮತಿ ರಮಾ ಪಿ ಅಡವಿ, ಶ್ರೀಮತಿ ವಿಜಯಾ ಡಿ ದೇಶಪಾಂಡೆ ಮತ್ತು ಬ್ಯಾಂಕಿನ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಬೀಳಗಿ ಪಟ್ಟಣ ಸಹಕಾರ ಬ್ಯಾಂಕ್ : 29ನೇ ವಾರ್ಷಿಕ ಮಹಾಸಭೆ

## ರೂ. 1,021 ಕೋಟಿಗೂ ಅಧಿಕ ದುಡಿಯುವ ಬಂಡವಾಳ, ಶ್ರೀಸಾಮಾನ್ಯರ ಆರ್ಥಿಕ ನೆರವಿಗೆ ಸಹಕಾರಿ ಬ್ಯಾಂಕ್ ಪೂರಕ




**ಬೀಳಗಿ :** ಕೇವಲ 11,00,600 ರೂ. ಶೇರು ಬಂಡವಾಳದೊಂದಿಗೆ 1997ರಲ್ಲಿ ಆರಂಭಗೊಂಡ ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕ್ 28 ವರ್ಷಗಳನ್ನು ಪೂರ್ಣಗೊಳಿಸಿ 29ನೇ ವರ್ಷಕ್ಕೆ ಕಾಲಿಟ್ಟಿದ್ದು, ಇದೀಗ 1,021 ಕೋಟಿ ರೂ. ಗೂ ಅಧಿಕ ದುಡಿಯುವ ಬಂಡವಾಳ ಹೊಂದಿದೆ. ಮುಂದಿನ ದಿನಗಳಲ್ಲಿ ರಾಜ್ಯದ ಶೆಡ್ಯೂಲ್ ಬ್ಯಾಂಕ್ ಆಗಿ ಪರಿವರ್ತನೆಯಾಗುವ ಗುರಿಯೊಂದಿಗೆ ಬ್ಯಾಂಕ್ ಮುನ್ನಡೆಯುತ್ತಿದೆ ಎಂದು ಮಾಜಿ ಸಚಿವ ಹಾಗೂ ಸಂಸ್ಥಾಪಕ ಅಧ್ಯಕ್ಷ ಎಸ್.ಆರ್. ಪಾಟೀಲ ಹೇಳಿದರು. ದಿನಾಂಕ:30.08.2026ರಂದು ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕಿನ ಆವರಣದಲ್ಲಿ ಹಮ್ಮಿಕೊಂಡಿದ್ದ 2025–26ನೇ ಸಾಲಿನ 29ನೇ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಸಂಸ್ಥೆ ನಿರ್ದೇಶಕ ಎಂ.ಎನ್. ಪಾಟೀಲ ವಾರ್ಷಿಕ ವರದಿ ಮಂಡಿಸಿ, ಬ್ಯಾಂಕ್ 873.80 ಕೋಟಿ ರೂ. ಠೇವಣಿ, 521 ಕೋಟಿ ರೂ. ಸಾಲ ವಿತರಣೆ, 90 ಕೋಟಿ ರೂ. ನಿಧಿ, 29 ಕೋಟಿ ರೂ. ಶೇರು ಬಂಡವಾಳ ಹಾಗೂ 336 ಕೋಟಿ ರೂ. ಹೂಡಿಕೆ ಹೊಂದಿದೆ ಎಂದು ತಿಳಿಸಿದರು. 2025–26ನೇ ಸಾಲಿನಲ್ಲಿ 3.08 ಕೋಟಿ ರೂ. ನಿವ್ವಳ ಲಾಭ ಗಳಿಸಿದೆ ಎಂದರು. ಬ್ಯಾಂಕಿನ ಪ್ರಧಾನ ಕಚೇರಿ, 15 ಶಾಖೆಗಳು ಹಾಗೂ ಎರಡು ವಿಸ್ತರಣಾ ಕೌಂಟರ್‌ಗಳಲ್ಲಿ ಕೋರ್ ಬ್ಯಾಂಕಿಂಗ್ ವ್ಯವಸ್ಥೆ ಅಳವಡಿಸಲಾಗಿದೆ. ಐಡಿಬಿಐ ಮೂಲಕ ಐಎಫ್‌ಎಸ್‌ಸಿ ಸೌಲಭ್ಯ ಸೇರಿದಂತೆ ವಿವಿಧ ಡಿಜಿಟಲ್ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸಲಾಗುತ್ತಿದ್ದು, ಗ್ರಾಹಕರು ಯಾವುದೇ ಶಾಖೆಯಿಂದ ಹಣಕಾಸು ವ್ಯವಹಾರ ನಡೆಸಲು ಅವಕಾಶವಿದೆ ಎಂದರು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳು, ಕ್ರೀಡಾಪಟುಗಳು, ಉತ್ತಮ ಗ್ರಾಹಕರು ಹಾಗೂ ಠೇವುದಾರರನ್ನು ಸನ್ಮಾನಿಸಲಾಯಿತು. ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಜಿ.ಎಸ್. ಬನಹಟ್ಟಿ ವಾರ್ಷಿಕ ವರದಿ ವಾಚಿಸಿದರು. ಉಪಾಧ್ಯಕ್ಷ ಸತ್ಯಪ್ಪ ಮೇಲ್ನಾಡ, ನಿರ್ದೇಶಕರಾದ ಎಂ.ಎನ್. ಪಾಟೀಲ, ಎಸ್.ಎಸ್.ರಂಗನಗೌಡ, ಎ.ವಿ. ಪಾಟೀಲ, ಎಂ.ಎಲ್. ಕೆಂಪಲಿಂಗನವರ, ಹೇಮಾದ್ರಿ ಕೊಪ್ಪಳ, ಕೆ.ಎಸ್. ಪತ್ರಿ, ಆರ್.ಎಸ್. ಶಿರೂರ, ಶ್ರೀಶೈಲ ಅಂಟಿನ, ರಾಜೇಂದ್ರ ಬಾರಕೇರ, ಭೀಮಸಿ ಮುಕಾಶಿ, ಅಭಿವೃದ್ಧಿ ಅಧಿಕಾರಿ ಐ.ಎಸ್. ಬಸರ್ಕೋಡ ಸೇರಿ ನಿರ್ದೇಶಕರು ಉಪಸ್ಥಿತರಿದ್ದರು.

## ಶ್ರೀ ಬಸವೇಶ್ವರ ಪಟ್ಟಣ ಸಹಕಾರ ಬ್ಯಾಂಕ್ : 58ನೇ ವರ್ಷದ ವಾರ್ಷಿಕ ಮಹಾಸಭೆ



**ಶಿರಾಳಕೊಪ್ಪ:** ಶ್ರೀ ಬಸವೇಶ್ವರ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ, ಶಿರಾಳಕೊಪ್ಪ ಇದರ 2025–26ನೇ ಸಾಲಿನ 58ನೇ ವರ್ಷದ ವಾರ್ಷಿಕ ಮಹಾಸಭೆಯನ್ನು ಶಿವಶಕ್ತಿ ಸಾಂಸ್ಕೃತಿಕ ಭವನದಲ್ಲಿ ಶ್ರೀಯುತ ಸೂರಣಗಿ ನಟರಾಜ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಬ್ಯಾಂಕಿನ ನಿರ್ದೇಶಕರಾದ ಶ್ರೀಯುತ ಜೆ.ಎಮ್. ರೇಣುಕಯ್ಯನವರು ಎಲ್ಲರಿಗೂ ಸ್ವಾಗತ ಕೋರಿದರು, ಬ್ಯಾಂಕಿನ ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯ ನಿರ್ದೇಶಕರು ಜ್ಯೋತಿಯನ್ನು ಬೆಳಗುವುದರ ಮೂಲಕ ಮಹಾಸಭೆಯನ್ನು ಉದ್ಘಾಟಿಸಿದರು ಹಾಗೂ ಬ್ಯಾಂಕಿನ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀಯುತ ಕೆ.ಎಸ್. ವೇದಮೂರ್ತಿಯವರು ಪ್ರಾಸ್ತಾವಿಕ ನುಡಿಯಲ್ಲಿ 2025–26ನೇ ಸಾಲಿನಲ್ಲಿ ಬ್ಯಾಂಕ್ ರೂ.49.28 ಲಕ್ಷ ಲಾಭಗಳಿಸಿದ್ದು, ಲಾಭಾಂಶದಲ್ಲಿ ಸದಸ್ಯರಿಗೆ ಶೇ.15% ಡಿವಿಡೆಂಡ್ ನೀಡಲು ಆಡಳಿತ ಮಂಡಳಿ ತಿರ್ಮಾನಿಸಿದ್ದನ್ನು ತಿಳಿಸಿದ್ದರು. ಬ್ಯಾಂಕಿನ ಅಧ್ಯಕ್ಷರಾದ ಸೂರಣಗಿ ನಟರಾಜ್ ರವರು ತಮ್ಮ ಅಧ್ಯಕ್ಷರ ಭಾಷಣದಲ್ಲಿ ಸಹಕಾರ ಬ್ಯಾಂಕುಗಳ ಕಾಯ್ದೆ ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿನ ಕಾಯ್ದೆಗಳ ಕುರಿತು ಮಾತನಾಡಿದರು.

ಬ್ಯಾಂಕಿನ ಕಾರ್ಯದರ್ಶಿಯವರು ವಂದನಾರ್ಪಣೆಯ ಮೂಲಕ ಸಭೆಯನ್ನು ಮುಕ್ತಾಯಗೊಳಿಸಿದರು ಹಾಗೂ ಈ ಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳು ಹಾಗೂ ಸರ್ವ ಸದಸ್ಯರು ಮತ್ತು ಬ್ಯಾಂಕಿನ ಕಾರ್ಯದರ್ಶಿಗಳು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.




# ನಿಮ್ಮ ಪ್ರಶ್ನೆ ನಮ್ಮ ಉತ್ತರ



**ಸುಧಾಕರ್ ಭಟ್**, ಬ್ಯಾಂಕಿಂಗ್ ಸಲಹೆಗಾರರು.

**ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ಕಲಂ 10ಎ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಅನ್ವಯಿಸಿ ರಿಜರ್ವ್ ಬ್ಯಾಂಕು ಹೊರಡಿಸಿರುವ ನಿರ್ದೇಶನಗಳ ಹಿನ್ನೆಲೆಯಲ್ಲಿ ನಮ್ಮ ಈ ಕೆಳಗಿನ ಪ್ರಶ್ನೆಗಳಿಗೆ ಸಮಾಧಾನ ನೀಡಿ.**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**01. ನಮ್ಮ ಬ್ಯಾಂಕಿನಲ್ಲಿ 12 ಚುನಾಯಿತ ನಿರ್ದೇಶಕರಿದ್ದು, ಅವರಲ್ಲಿ ಆರು ಮಂದಿ ನಿರಂತರ ಹತ್ತು ವರ್ಷಗಳ ಅವಧಿಯನ್ನು ಪೂರೈಸಿದ್ದಾರೆ. ಈ ಆರೂ ನಿರ್ದೇಶಕರು ಒಂದೇ ಬಾರಿಗೆ ರಾಜೀನಾಮೆ ನೀಡಬಹುದೇ?**

**ಉತ್ತರ** : ಕಾನೂನಿನ ಪ್ರಕಾರ ಯಾವುದೇ ನಿರ್ದೇಶಕರಿಗೆ ರಾಜೀನಾಮೆ ಸಲ್ಲಿಸದಂತೆ ತಡೆಯಲು ಸಾಧ್ಯವಿಲ್ಲ. ಆರೂ ನಿರ್ದೇಶಕರು ಒಂದೇ ಬಾರಿಗೆ ರಾಜೀನಾಮೆ ನೀಡಬಹುದು. ಆದರೆ, ಹೀಗೆ ಮಾಡುವುದರಿಂದ ಬ್ಯಾಂಕಿನ ಆಡಳಿತ ಮಂಡಳಿಯ ಕೋರಂ ಮತ್ತು ಕಾನೂನಾತ್ಮಕ ಕಾರ್ಯಚಟುವಟಿಕೆಗಳ ಮೇಲೆ ತಕ್ಷಣದ ಪರಿಣಾಮಗಳು ಬೀರುತ್ತವೆ.

**02. ಆರು ನಿರ್ದೇಶಕರ ರಾಜೀನಾಮೆಯ ನಂತರ ಉಳಿದ ಆರು ನಿರ್ದೇಶಕರು ಬ್ಯಾಂಕಿನ ಆಡಳಿತ ನಡೆಸಬಹುದೇ?**

**ಉತ್ತರ** : ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರ ಸೆಕ್ಷನ್ 28A ರ ಪ್ರಕಾರ, 12 ಜನ ಚುನಾಯಿತ ನಿರ್ದೇಶಕರಲ್ಲಿ 6 ಜನರು ಒಂದೇ ಬಾರಿಗೆ ರಾಜೀನಾಮೆ ನೀಡಿದರೆ, ಬ್ಯಾಂಕಿನ ಆಡಳಿತ ಮಂಡಳಿಯ ಮೇಲೆ ಉಂಟಾಗುವ ಕಾನೂನಾತ್ಮಕ ಮತ್ತು ಆಡಳಿತಾತ್ಮಕ ಪರಿಣಾಮಗಳು ಈ ಕೆಳಗಿನಂತಿವೆ:

(i) ಮಂಡಲಿಯ ಸಭಾವಶ್ಯಕ ಸಂಖ್ಯೆಯು (ಕೋರಂ) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಮಂಡಲಿಯ ಬಲದ ಶೇ.50ರ ನಂತರದ ಸಂಖ್ಯೆಯು ಆಗಿರತಕ್ಕದ್ದು.

(ii) ಮಂಡಳಿಯಲ್ಲಿ ಕೇವಲ 6 ನಿರ್ದೇಶಕರು ಮಾತ್ರ ಉಳಿಯುವುದರಿಂದ, ಕಾಯ್ದೆಯ ಪ್ರಕಾರ ಅಗತ್ಯವಿರುವ 7 ನಿರ್ದೇಶಕರ ಕೋರಂ ಸಿಗುವುದಿಲ್ಲ. ಹೀಗಾಗಿ ಆಡಳಿತ ಮಂಡಳಿಯು ಕಾನೂನಾತ್ಮಕವಾಗಿ ಯಾವುದೇ ಸಭೆ ನಡೆಸಲು, ನಿರ್ಧಾರಗಳನ್ನು ತೆಗೆದುಕೊಳ್ಳಲು ಅಥವಾ ಪ್ರಪೋಸಲ್‌ಗಳನ್ನು ಅಂಗೀಕರಿಸಲು ಸಂಪೂರ್ಣವಾಗಿ ಅಸಮರ್ಥವಾಗುತ್ತದೆ.

(iii) ಸಾಮಾನ್ಯವಾಗಿ ಮಂಡಳಿಯಲ್ಲಿ ಖಾಲಿ ಉಳಿಯುವ ಸ್ಥಾನಗಳನ್ನು ಉಳಿದ ನಿರ್ದೇಶಕರು ಕೋ-ಆಪ್ಷನ್ ಮೂಲಕ ಭರ್ತಿ ಮಾಡಬಹುದು. ಆದರೆ ಕೋ-ಆಪ್ಷನ್ ಮಾಡಲು ಆಡಳಿತ ಮಂಡಳಿಯ ಸಿಂಧುವಾದ ಸಭೆ ನಡೆಯಬೇಕು ಮತ್ತು ಅದಕ್ಕೆ ಕೋರಂ ಅಗತ್ಯವಿರುತ್ತದೆ. ಕೋರಂ ಇಲ್ಲದಿರುವುದರಿಂದ ಉಳಿದ 6 ನಿರ್ದೇಶಕರಿಗೆ ನೂತನ ನಿರ್ದೇಶಕರನ್ನು ನೇಮಕ ಮಾಡುವ ಅಧಿಕಾರವಿರುವುದಿಲ್ಲ.

(iv) ಕೋರಂ ಇಲ್ಲದೆ ಆಡಳಿತ ಮಂಡಳಿಯು ಸ್ಥಗಿತಗೊಂಡಾಗ, KCS ಕಾಯ್ದೆಯ ಸೆಕ್ಷನ್ 30ರ ಅಡಿಯಲ್ಲಿ ಸಹಕಾರ ಸಂಘಗಳ ನಿಬಂಧಕರು ಮಧ್ಯಪ್ರವೇಶಿಸುತ್ತಾರೆ. ಬ್ಯಾಂಕಿನ ಆಡಳಿತವನ್ನು ವಹಿಸಿಕೊಳ್ಳಲು ಆಡಳಿತಾಧಿಕಾರಿ ನೇಮಿಸುತ್ತಾರೆ.

(v) ಸೆಕ್ಷನ್ 28Aರ ಪ್ರಕಾರ ಆಡಳಿತ ಮಂಡಳಿಯು 13ಕ್ಕಿಂತ ಕಡಿಮೆಯಿಲ್ಲದ ಸದಸ್ಯರನ್ನು ಹೊಂದಿರಬೇಕು. 12 ಜನ ಚುನಾಯಿತ ನಿರ್ದೇಶಕರಿದ್ದಾಗ ಮಂಡಳಿಯ ಕನಿಷ್ಠ ಸದಸ್ಯರ ಸಂಖ್ಯೆಯ ನಿಯಮದ ಉಲ್ಲಂಘನೆಯಾಗುತ್ತದೆ. ಆದ್ದರಿಂದ, ಈಗ ಖಾಲಿಯಿರುವ ಒಂದು ಸ್ಥಾನವನ್ನು ಮೊದಲು ಭರ್ತಿಮಾಡುವುದು ಉಚಿತ. ಅಲ್ಲದೇ, ಎಲ್ಲ ಆರು ನಿರ್ದೇಶಕರು ಒಮ್ಮೆಗೆ ರಾಜೀನಾಮೆ ನೀಡುವ ಅವಶ್ಯಕತೆಯಿಲ್ಲ.

**03. ಆರು ನಿರ್ದೇಶಕರ ರಾಜೀನಾಮೆಯನ್ನು ರಿಜಿಸ್ಟ್ರಾರಿಗೆ, ರಿಜರ್ವ್ ಬ್ಯಾಂಕಿಗೆ ಮತ್ತು ಚುನಾವಣಾ ಪ್ರಾಧಿಕಾರಕ್ಕೆ ತಿಳಿಸುವ ಅಗತ್ಯವಿದೆಯೇ?**

**ಉತ್ತರ:** ಸಾಮೂಹಿಕ ರಾಜೀನಾಮೆಗಳಿಂದಾಗಿ (ಉದಾಹರಣೆಗೆ 12 ರಲ್ಲಿ 6 ನಿರ್ದೇಶಕರು ರಾಜೀನಾಮೆ ನೀಡಿದಾಗ) ಮಂಡಳಿಯ ಬಲವು ಕೋರಂಗಿಂತ ಕಡಿಮೆಗೆ ಕುಸಿದರೆ, ಉಳಿದ ನಿರ್ದೇಶಕರಿಗೆ ಅಧಿಕೃತ ಸಭೆ ನಡೆಸಲು ಅಥವಾ ಹೊಸ ನಿರ್ದೇಶಕರನ್ನು ಕೋ-ಆಪ್ಷನ್ ಮಾಡಿಕೊಳ್ಳಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಕೋರಂ ಅಭಾವದ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ತಕ್ಷಣವೇ ಸಹಕಾರ ಸಂಘಗಳ ನಿಬಂಧಕರು, ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ರಾಜ್ಯ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಮಾಹಿತಿ ನೀಡಬೇಕು.

**04. ಖಾಲಿ ಬೀಳುವ ನಿರ್ದೇಶಕರ ಸ್ಥಾನಗಳನ್ನು ಭರ್ತಿ ಮಾಡುವ ವಿಧಾನ ಯಾವುದು?**

**ಉತ್ತರ:** ಆಡಳಿತ ಮಂಡಳಿಯಲ್ಲಿ ಖಾಲಿ ಬೀಳುವ ನಿರ್ದೇಶಕರ ಸ್ಥಾನಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯು ಆಡಳಿತ ಮಂಡಳಿಯಲ್ಲಿ ಕೋರಂ ಇದೆಯೇ ಅಥವಾ ಇಲ್ಲವೇ ಎಂಬುದರ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿರುತ್ತದೆ. ಆಡಳಿತ ಮಂಡಳಿಯಲ್ಲಿ ಕೋರಂ ಇದ್ದರೆ (7 ಅಥವಾ ಅದಕ್ಕಿಂತ ಹೆಚ್ಚು ನಿರ್ದೇಶಕರು ಇದ್ದರೆ), ಆಡಳಿತ ಮಂಡಳಿಯು ಉಳಿದ ಅವಧಿಗೆ ಅರ್ಹ ಸದಸ್ಯರನ್ನು ಕೋ-ಆಪ್ಷನ್ (ಸಹ-ಆಯ್ಕೆ) ಮೂಲಕ ನಿರ್ದೇಶಕರಾಗಿ ನೇಮಿಸಿಕೊಳ್ಳುತ್ತದೆ. ಸಾಮೂಹಿಕ ರಾಜೀನಾಮೆಗಳಿಂದಾಗಿ (ಉದಾಹರಣೆಗೆ 12 ರಲ್ಲಿ 6 ನಿರ್ದೇಶಕರು ರಾಜೀನಾಮೆ ನೀಡಿದಾಗ) ಮಂಡಳಿಯ ಬಲವು ಕೋರಂಗಿಂತ ಕಡಿಮೆಗೆ ಕುಸಿದರೆ, ಉಳಿದ ನಿರ್ದೇಶಕರಿಗೆ ಅಧಿಕೃತ ಸಭೆ ನಡೆಸಲು ಅಥವಾ ಹೊಸ ನಿರ್ದೇಶಕರನ್ನು ಕೋ-ಆಪ್ಷನ್ ಮಾಡಿಕೊಳ್ಳಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ.

**05. ನಿರ್ದೇಶಕರ ರಾಜೀನಾಮೆಯನ್ನು ಯಾರು ಅಂಗೀಕರಿಸುತ್ತಾರೆ?**

**ಉತ್ತರ:** ರಾಜೀನಾಮೆಯನ್ನು ಸಲ್ಲಿಸಿದ ನಿರ್ದೇಶಕ ಹದಿನೈದು ದಿನಗಳ ಒಳಗಾಗಿ ಲಿಖಿತವಾಗಿ ವಾಪಸ್ಸು ಪಡೆಯದಿದ್ದಲ್ಲಿ, ಹದಿನೈದನೇಯ ದಿನ ಮುಕ್ತಾಯವಾದ ಕೂಡಲೇ ಆ ನಿರ್ದೇಶಕನ ರಾಜೀನಾಮೆಯು ಅಂಗೀಕರಿಸಲ್ಪಟ್ಟಿದೆ ಎಂದು ಭಾವಿಸತಕ್ಕದ್ದು ಹಾಗೂ ಆ ಸ್ಥಾನವು ತೆರವಾಗಿದೆ ಎಂದು ತಿಳಿಯತಕ್ಕದ್ದು.

**06. ಮೂರು ವರ್ಷಗಳ ವಿಶ್ರಾಂತಿ ಸಮಯದಲ್ಲಿ (ಕೂಲಿಂಗ್-ಆಫ್ ಅವಧಿ) ಮಾಜಿ ನಿರ್ದೇಶಕರು ಬ್ಯಾಂಕಿನೊಂದಿಗೆ ಇಟ್ಟುಕೊಳ್ಳಬಹುದಾದ ಸಂಬಂಧಗಳು ಯಾವುವು?**

ಉತ್ತರ: ಕೂಲಿಂಗ್-ಆಫ್ ಅವಧಿಯಲ್ಲಿ ಆ ಮಾಜಿ ನಿರ್ದೇಶಕರು ಬ್ಯಾಂಕಿಗೆ ಕಾನೂನು ಸಲಹೆಗಾರರಾಗಿ, ಆಡಿಟರ್ ಆಗಿ, ಸಮಾಲೋಚಕರಾಗಿ (Consultants) ಅಥವಾ ಯಾವುದೇ ಲಾಭದಾಯಕ ಹುದ್ದೆಯಲ್ಲಿದ್ದುಕೊಂಡು ಸೇವೆ ಸಲ್ಲಿಸುವಂತಿಲ್ಲ ಅಥವಾ ಅದಕ್ಕಾಗಿ ಯಾವುದೇ ರೀತಿಯ ಸಂಭಾವನೆ/ಸಂಬಳ ಪಡೆಯುವಂತಿಲ್ಲ. ಅವರು ಬ್ಯಾಂಕಿನಲ್ಲಿ ತಮ್ಮ ಶೇರುಗಳನ್ನು ಮುಂದುವರಿಸಿದ್ದರೆ, ಒಬ್ಬ ಸಾಮಾನ್ಯ ಸದಸ್ಯರಾಗಿ ಮಾತ್ರ ಇರುತ್ತಾರೆಯೇ ಹೊರತು ಯಾವುದೇ ವಿಶೇಷ ಹಕ್ಕುಗಳನ್ನು ಹೊಂದಿರುವುದಿಲ್ಲ. ಬ್ಯಾಂಕಿನಲ್ಲಿ ಠೇವಣಿಗಳನ್ನು ಇರಿಸಲು ಅಥವಾ ಸಾಮಾನ್ಯ ಗ್ರಾಹಕರಂತೆ ಬ್ಯಾಂಕಿಂಗ್ ಸೇವೆಗಳನ್ನು ಪಡೆಯಲು ಅವರಿಗೆ ಅವಕಾಶವಿರುತ್ತದೆ.

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
ಕುತೂಹಲಕಾರಿಯಾದ ಸುದ್ದಿಗಳು ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಗದಗ ಮತ್ತು ರೋಣ ತಾಲೂಕುಗಳಲ್ಲಿ ಐದು ವರ್ಷಗಳ ಹಿಂದೆ ಪ್ರಾಯೋಗಿಕವಾಗಿ ಅಮೃತ ಭೋಜನ ಯೋಜನೆ ಜಾರಿಗೆ ತರಲಾಯಿತು. ಇದರಿಂದ ತರಗತಿಗಳಿಗೆ ಗೈರಾಗುವ ವಿದ್ಯಾರ್ಥಿಗಳ ಸಂಖ್ಯೆ ಗಣನೀಯ ಇಳಿಕೆಯಾಯಿತು. ನಂತರ ಇದನ್ನು ಗದಗ ಜಿಲ್ಲೆಯಾದ್ಯಂತ ಎಲ್ಲಾ ಸರ್ಕಾರಿ ಶಾಲೆಗಳಿಗೂ ವಿಸ್ತರಿಸಲಾಗಿದ್ದು, ಇದೀಗ ಗ್ರಾಮೀಣ ಪ್ರದೇಶದ ಅನೇಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ಸುಧಾರಿಸಿದೆ.
- ಥೈಲ್ಯಾಂಡ್‌ನಲ್ಲಿ ಮುಕ್ತಾಯಗೊಂಡ ಏಷ್ಯಾ ಪೆಸಿಫಿಕ್ ಯೋಗಾಸನ ಸ್ಪೋರ್ಟ್ಸ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿದ್ದ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಕೆರ್ವಾಶೆ ಊರಿನವರಾದ ನಿಖಿಲ್ ಎ. ಪೂಜಾರಿ ಅವರು ಯೋಗ ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿ ದೇಶಕ್ಕೆ ಮಾತ್ರವಲ್ಲದೆ ಹೆತ್ತವರಿಗೂ ಕೀರ್ತಿ ತಂದಿದ್ದಾರೆ.
- ಬೆಂಗಳೂರಿನ ಕೇಶವ್ ಪ್ರಸಾದ್ ಅವರು, ತಮ್ಮ ಕಾರಿನಲ್ಲಿ ಲಂಡನ್ ತಲುಪುವ ವೇಳೆಗೆ 27 ದೇಶ, ಎಂಟು ವೀಸಾ ಮತ್ತು 85 ದಿನಗಳ ರಸ್ತೆ ಮಾರ್ಗವನ್ನು ಒಳಗೊಂಡಿತ್ತು. ಬ್ರಿಟನ್, ಶೆಂಗೆನ್ ವಲಯ, ರಷ್ಯಾ, ಕಜಕಿಸ್ತಾನ, ಉಜ್ಬೆಕಿಸ್ತಾನ, ಕಿರ್ಗಿಸ್ತಾನ, ಚೀನಾ ಮತ್ತು ಟರ್ಕಿ ದೇಶದ ವೀಸಾ ಪಡೆಯಲು ಮೂರರಿಂದ ಆರು ತಿಂಗಳು ಕಾಯಬೇಕಾಯಿತು.
- ಸರ್ಕಾರದ ಜಮೀನು, ರಸ್ತೆ ಬದುವಿನಲ್ಲಿ ವಿವಿಧ ಬಗೆಯ ಮರಗಳನ್ನು ಬೆಳೆಸಿ ಆದಾಯ ಗಳಿಸಲು ಹಾಗೂ ಹಸಿರೀಕರಣ ಹೆಚ್ಚಿಸುವ ಜತೆಗೆ ರೈತರ ಆದಾಯಕ್ಕೆ ಪೂರಕವಾಗಿ ರೂಪಿಸಿರುವ ತೇಗದ ಸಿರಿ ಯೋಜನೆಯಡಿ ಸುಮಾರು ರೂ.500 ಕೋಟಿಯನ್ನು ಮೂರು ವರ್ಷದ ಅವಧಿಯಲ್ಲಿ ವಿನಿಯೋಗಿಸಲು ನಿರ್ಧರಿಸಲಾಗಿದ್ದು, ಮರ ಬೆಳೆದವರಿಗೆ ಹೆಚ್ಚಿನ ಆದಾಯ ಸಿಗಲಿದೆ.
- ದೇಶದ ಇತರ ಭಾಗಗಳಿಗೆ ಹೋಲಿಸಿದರೆ ದಕ್ಷಿಣ ಭಾರತದಲ್ಲಿ ಬರ ಸ್ಥಿತಿ ವೇಗವಾಗಿ ಹೆಚ್ಚುತ್ತಿದೆ. ಮುಖ್ಯವಾಗಿ ಪೂರ್ವ ಕರಾವಳಿಯಲ್ಲಿರುವ ಆಂಧ್ರಪ್ರದೇಶವು ಅತ್ಯಂತ ತೀವ್ರ ಬರಪೀಡಿತ ಪ್ರದೇಶಗಳಲ್ಲಿ ಒಂದಾಗಿದೆ ಎಂದು ಹವಾಮಾನ ವರದಿಗಳನ್ನು ಆಧರಿಸಿ ನಡೆಸಲಾದ ಅಧ್ಯಯನವು ಇಂಟರ್ ನ್ಯಾಷನಲ್ ಜರ್ನಲ್ ಆಫ್ ಕ್ಲೈಮ್ಯಾಟಾಲಜಿಯಲ್ಲಿ ಪ್ರಕಟವಾಗಿದೆ.

## ಓದುಗರ ಅನಿಸಿಕೆ...




**ನಾವು ಸಂಭ್ರಮಿಸಬೇಕಾದ ವಿಷಯ :** 2027ನೇ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದ ಜಿಡಿಪಿ ಅಂಕಿ–ಅಂಶಗಳ ಪ್ರಕಾರ ಬರೋಬ್ಬರಿ ಶೇ. 7.8ರಷ್ಟು ವೃದ್ಧಿಯನ್ನು ದಾಖಲಿಸಿದೆ ಎಂದು ಸಂಭ್ರಮಿಸಲಾಯಿತು. ಆದರೆ, ಹೀಗೆ ದೇಶದ ಜಿಡಿಪಿಯಲ್ಲಿ ದಾಪುಗಾಲು ಹಾಕಲು ನಮ್ಮ ರಾಜ್ಯದ ಕೊಡುಗೆಯೇ ಶೇ.9ರಷ್ಟಿದ್ದು, ದೇಶದ ತಲಾ ಜಿಡಿಪಿಗಿಂತಲೂ ಸುಮಾರು ಎರಡು ಪಟ್ಟು ಹೆಚ್ಚಾಗಿರುವುದನ್ನು ಕನ್ನಡಿಗರಾದ ನಾವು ಸಂಭ್ರಮಿಸಬೇಕಾದ ವಿಷಯ.

**▸▸ ಮಲ್ಲೇಶ ಮರುಳಪ್ಪ ಪಾಟೀಲ, ರೋಣ**

**ಪ್ರೋತ್ಸಾಹ ನೀಡಬೇಕಿದೆ :** ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ದೇಶದ ಆರ್ಥಿಕ ಬೆಳವಣಿಗೆ ಮತ್ತು ಗ್ರಾಮೀಣ ಕೃಷಿಕ, ನಗರಗಳಲ್ಲಿನ ಮಧ್ಯಮ ವರ್ಗದವರ ಆರ್ಥಿಕಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಆ ಮೂಲಕ ಅವರ ನಂಬಿಕೆಗಳಿಸಿವೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಹಾಗೂ ಆರ್‌ಬಿಐ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಪೂರಕವಾಗಿ ಪ್ರೋತ್ಸಾಹ ನೀಡಬೇಕಿದೆ.

**▸▸ ಎಸ್. ಪ್ರಶಾಂತ ಭಟ್, ಹೊನ್ನಾವರ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.